# ಚದುರಂಗ ಅವರ 'ನಾಲ್ಕು ಮೊಳ ಭೂಮಿ' ಕಥೆಯಲ್ಲಿನ ಸಮಕಾಲೀನ ತಲ್ಲಣಗಳು.

**ಶಿವರಾಜು ಎನ್.**
ಸಂಶೋಧನಾರ್ಥಿ
ಕುವೆಂಪು ಕನ್ನಡ ಅಧ್ಯಯನ ಕೇಂದ್ರ
ಕುಪ್ಪಳಿ, ತೀರ್ಥಹಳ್ಳಿ ತಾಲ್ಲೂಕು,
ಶಿವಮೊಗ್ಗ ಜಿಲ್ಲೆ.

**Article Link: https://aksharasurya.com/2023/08/shivaraju-n-4/**

## ABSTRACT:

ಕನ್ನಡ ಕಥನ ಸಾಹಿತ್ಯದಲ್ಲಿ ಭೂ ಸಂವೇದನೆಯನ್ನು ಕುರಿತ ಕೆಲವು ಕಥೆಗಳಲ್ಲಿ 'ನಾಲ್ಕು ಮೊಳ ಭೂಮಿ' ಕಥೆ ವಿಭಿನ್ನವಾಗಿ ನಿಲ್ಲುತ್ತದೆ. ಭೂಸಂವೇದನೆಯನ್ನು ಕುರಿತು ಪ್ರಕಟವಾಗಿರುವ ಬಹುತೇಕ ಕಥೆಗಳು ಸರ್ಕಾರಿ ಜಮೀನಿನ ಮಂಜೂರಾತಿ, ಅಕ್ರಮ ಖಾತಾ ವರ್ಗಾವಣೆ, ಸರ್ಕಾರಿ ಯೋಜನೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆ. ವಿಭಾಗ ಪತ್ರಗಳಲ್ಲಿನ ನ್ಯೂನತೆಗಳು ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟವು. ಆದರೆ ನಾಲ್ಕು ಮೊಳ ಭೂಮಿ ಅಕ್ರಮ ಭೂ ಒತ್ತುವರಿಯನ್ನು ಕುರಿತು ಮಾತಾಡುತ್ತದೆ.

ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ಅಳತೆಗೆಂದು ಸಲ್ಲಿಕೆಯಾಗುವ ಹೆಚ್ಚಿನ ಅರ್ಜಿಗಳು ಹದ್ದುಬಸ್ತಿಗೆ ಸಂಬಂಧಪಟ್ಟವು. ಸಾರ್ವಜನಿಕರ ಅಸಹಕಾರ, ಅರ್ಜಿದಾರರ, ಬಾಜುದಾರರ ಅನಕ್ಷರತೆ, ದೌರ್ಬಲ್ಯ, ರಾಜಕೀಯ ಹಸ್ತಕ್ಷೇಪ, ಇತ್ಯಾದಿ ಕಾರಣಗಳಿಂದ ಎಲ್ಲಾ ಅರ್ಜಿಗಳಿಗೂ ನ್ಯಾಯದೊರಕಿಸಿಕೊಡಲು ಸಾಧ್ಯವಾಗುತ್ತಿಲ್ಲ. ಹಿಡುವಳಿ ಭೂಮಿಯ ಒತ್ತುವರಿಯನ್ನು ತೆರವುಗೊಳಿಸುವ ಅಧಿಕಾರ ತಹಸೀಲ್ದಾರ್‌ರವರಿಗೆ ಇಲ್ಲದ ಕಾರಣದಿಂದ ಅಕ್ರಮ ಹಿಡುವಳಿ ಜಮೀನುಗಳ ಭೂ ಒತ್ತುವರಿಯನ್ನು ತೆರವುಗೊಳಿಸುವುದು ಕಷ್ಟ ಸಾಧ್ಯವಾಗಿದೆ. ಅಕ್ಷರಸ್ಥ ರೈತರು ಅಕ್ಕಪಕ್ಕದ ಜಮೀನಿನ ರೈತರ ಜೊತೆ ವಿಶ್ವಾಸ ಹಾಳಾಗಬಾರದೆಂಬ ಕಾರಣಕ್ಕೆ ಜಮೀನುಗಳನ್ನು ಅಳತೆ ಮಾಡಿಸುವ ಗೋಜಿಗೆ ಹೋಗುವುದಿಲ್ಲ.

ಕಂದಾಯ ಇಲಾಖೆ ಯಾವುದೇ ಹೊಸನಿಯಮಗಳನ್ನು ಜಾರಿಗೆ ತಂದರೂ ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರುವುದ–ರಿಂದ ಮೈಸೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳು ಅಷ್ಟು ಸುಲಭವಾಗಿ ಯಶಸ್ವಿಯಾಗುವುದಿಲ್ಲ. ಜಮೀನಿನ ಪೌತಿ ಖಾತೆಯ ವರ್ಗಾವಣೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಮೃತ ವ್ಯಕ್ತಿಯ ಮರಣ ಪ್ರಮಾಣ ಪತ್ರವನ್ನು ಆರ್.ಡಿ.ಎಸ್. ವಂಶವೃಕ್ಷವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗುತ್ತದೆ. ವಂಶವೃಕ್ಷದಲ್ಲಿ ಕಡ್ಡಾಯವಾಗಿ ಮೃತವ್ಯಕ್ತಿಯ

ಎಲ್ಲಾ ಹೆಣ್ಣುಮಕ್ಕಳ ಹೆಸರನ್ನು ಸೇರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕುಟುಂಬ ಕಲಹಗಳು ಹೆಚ್ಚಾಗುತ್ತವೆ.

**KEYWORDS:** ಭೂಮಿ, ಭೂ ಸಂವೇದನೆ, ಹಿಡುವಳಿ, ಒತ್ತುವರಿ, ಕಂದಾಯ, ವ್ಯಾಜ್ಯ.

ಕನ್ನಡ ಕಥನ ಸಾಹಿತ್ಯಕ್ಕೆ ಹಳೇ ಮೈಸೂರು ಪ್ರಾಂತ್ಯದ ಕೊಡುಗೆಯನ್ನು ಕು–ರಿತು ಮಾತನಾಡುವಂತಹ ಸಂದರ್ಭದಲ್ಲಿ ಚದುರಂಗ ಕಾವ್ಯನಾಮದ ಸುಬ್ರಹ್ಮಣ್ಯ ರಾಜೇ ಅರಸು ರವರು ಅಗ್ರಗಣ್ಯರಾಗಿ ನಿಲ್ಲುತ್ತಾರೆ. ಗ್ರಾಮೀಣ ಬದುಕನ್ನು ಅನುಲಕ್ಷಿಸಿ ಕಥಾ ಸಾಹಿತ್ಯ ರಚಿಸಿದವರ ಸಾಲಿನಲ್ಲಿ ವಿಭಿನ್ನವಾಗಿ ಗುರುತಿಸಿಕೊಳ್ಳುತ್ತಾರೆ. ಗಾಂಧೀಜಿಯವರ ವಿಚಾರಧಾರೆಗೆ ಮನಸೋತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದವರು. ಎಡಪಂಥೀಯ ವಿಚಾರಧಾರೆಗಳಿಗೆ ಪ್ರಭಾವಿತರಾದ ಅವರು ಎಂ. ಎನ್. ರಾಯ್ ರವರ ಪ್ರಬಲ ಅನುಯಾಯಿಯಾಗಿದ್ದರು. ರಾಜಮನೆತನದ ಸಿರಿಸಂಪತ್ತು, ಅಲ್ಲಿನ ಆಡಂಬರ ಚದುರಂಗರಿಗೆ ಇಷ್ಟವಾಗಲಿಲ್ಲವಾದ್ದರಿಂದ ಶ್ರೀಮಂತ ವಧು ತಂದು ವಿವಾಹ ಮಾಡಬೇಕೆಂಬ ಮನೆಯವರ ಆಸೆಗೆ ವಿರುದ್ಧವಾಗಿ ಪ್ರೀತಿಸಿ ತಮ್ಮಿಷ್ಟವಾದವರನ್ನು ಮದುವೆಯಾದರು. ಮೈಸೂರು ತೊರೆದು ಹುಟ್ಟೂರು ಕಲ್ಲಹಳ್ಳಿಯಲ್ಲಿ ಬೇಸಾಯ ಪ್ರಾರಂಭಿಸಿದರು. ಅಲ್ಲಿನ ಅನುಭವಗಳೇ ಮುಂದೆ ಕತೆ, ಕಾದಂಬರಿಗಳಲ್ಲಿ ಮೈತಾಳಿದವು. ಇವರ 'ನಾಲ್ಕು ಮೊಳ ಭೂಮಿ' ಕನ್ನಡದ ಅತ್ಯುತ್ತಮ ಕಥೆಗಳಲ್ಲೊಂದು. ಕಥೆಯೊಳಗೊಂದು ಕಥಾ ತಂತ್ರದ ಬಳಕೆಯಿಂದ ಗ್ರಾಮ ಮತ್ತು ನಗರ ಬದುಕಿನ ಅನ್ಯಾಯಗಳನ್ನು ಸಾಂಕೇತಿಸುವ ಈ ಕಥೆ ಭೂ ವಿವಾದಗಳ ಸ್ವರೂಪವನ್ನು ತಿಳಿಸಿಕೊಡುತ್ತದೆ.

ಕನ್ನಡ ಕಥನ ಸಾಹಿತ್ಯದಲ್ಲಿ ಭೂ ಸಂವೇದನೆಯನ್ನು ಕುರಿತು ಕೆಲವೇ ಕೆಲವು ಕಥೆಗಳಲ್ಲಿ 'ನಾಲ್ಕು ಮೊಳ ಭೂಮಿ' ಕಥೆ ವಿಭಿನ್ನವಾಗಿ ನಿಲ್ಲುತ್ತದೆ. ಭೂಸಂವೇದನೆಯನ್ನು ಕುರಿತು ಪ್ರಕಟವಾಗಿರುವ ಬಹುತೇಕ ಕಥೆಗಳು ಸರ್ಕಾರಿ ಜಮೀನಿನ ಮಂಜೂರಾತಿ, ಅಕ್ರಮ ಖಾತಾ ವರ್ಗಾವಣೆ, ಸರ್ಕಾರಿ ಯೋಜನೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆ. ವಿಭಾಗ ಪತ್ರಗಳಲ್ಲಿನ ನ್ಯೂನತೆಗಳು ಇತ್ಯಾದಿ ವಿಷಯಗಳಿಗೆ ಸಂಬಂಧಪಟ್ಟವು. ಆದರೆ ನಾಲ್ಕು ಮೊಳ ಭೂಮಿ ಅಕ್ರಮ ಭೂ ಒತ್ತುವರಿಯನ್ನು ಕುರಿತು ಮಾತಾಡುತ್ತದೆ.

ಈ ಕಥೆಯ ನಿರೂಪಕ ವಕೀಲನಾಗಿದ್ದಾನೆ. ತನ್ನ ಹೆಂಡತಿ ಲಲಿತಾ ಬರೆದ 'ನಾಲ್ಕು ಮೊಳ ಭೂಮಿ' ಕಥೆಯನ್ನು ಓದಿದ ನಂತರ ಆತನ ಮನಸ್ಸಿನಲ್ಲಿ ಈ

ರೀತಿಯ ದುಃಖ ಉಂಟಾಗುತ್ತದೆ. “ನಾಲ್ಕು ಮೊಳ ಭೂಮಿ, ನಾಲ್ಕೇ ನಾಲ್ಕು ಮೊಳ ಭೂಮಿಗಾಗಿ ಎಂಥೆಂಥ ಕಲಹಗಳು ಎಂಥೆಂಥ ಅಕೃತ್ಯಗಳು ನಡೆಯುತ್ತವೆ! ಮಾನವನ ಸುಗುಣಗಳು ಕರಗಿ ಹೋಗಿ ಸ್ವಾರ್ಥದ ಹುಚ್ಚುಕಳ್ಳಿ ತನಗೆ ತಾನೇ ಬೆಳೆಯುತ್ತದೆ. ಸ್ವಾರ್ಥ! ಭೂಮಿಯ ಹಂಬಲ! ನ್ಯಾಯಾಲಯಕ್ಕೆ ಬರುವ ವ್ಯಾಜ್ಯಗಳಲ್ಲಿ ಹೆಚ್ಚಿನ ಸಂಖ್ಯೆ ಭೂಮಿಗೇ ಸಂಬಂಧಪಟ್ಟವು ಭೂಮಿ ಭೂಮಿ ಭೂಮಿ ಎಂಥ ಹುಚ್ಚು!”[1] ಶ್ರೀಮತಿ ಇಂದಿರಾ ಗಾಂಧಿಯವರು ಜಾರಿಗೆ ತಂದ “ಉಳುವವನೇ ಭೂಮಿಯ ಒಡೆಯ” ಕಾಯಿದೆಯನ್ನು ಹೊರತು ಪಡಿಸಿದರೆ ಸ್ವಾತಂತ್ರ್ಯಾ ನಂತರ ಜಾರಿಗೆ ಬಂದ ಯಾವ ಭೂಸುಧಾರಣಾ ಕಾಯಿದೆಗಳೂ ಭೂಮಿಯ ಸಮಾನವಾದ ಹಂಚಿಕೆಗೆ ಅವಕಾಶ ಕಲ್ಪಿಸಲಿಲ್ಲ.

ಕರ್ನಾಟಕ ರಾಜ್ಯದಲ್ಲಿ ಈ ಹಿಂದೆ ಭೂಮಿಯನ್ನು ಕ್ರಯಕ್ಕೆ ಪಡೆಯುವವರು ಕರ್ನಾಟಕದವರೇ ಆಗಿರಬೇಕು. ಅವರು ವ್ಯವಸಾಯಗಾರರಾಗಿರಬೇಕು ಅಥವಾ ವ್ಯವಸಾಯಗಾರ ಕುಟುಂಬಕ್ಕೆ ಸೇರಿದವರಾಗಿರಬೇಕೆಂಬ ನಿಯಮವಿತ್ತು. ಆದರೆ ಈ ನಿಯಮವನ್ನು ಈಗ ರದ್ದು ಮಾಡಿರುವುದರಿಂದ ಹೊರರಾಜ್ಯದವರು, ಬಂಡವಾಳ ಶಾಹಿಗಳು ಹೆಚ್ಚಿನ ಪ್ರಮಾಣದ ಭೂಮಿಯನ್ನು ಕ್ರಯಕ್ಕೆ ಪಡೆಯುತ್ತಿದ್ದಾರೆ. ಭವಿಷ್ಯದ ಬಗ್ಗೆ ಚಿಂತೆಯೇ ಇಲ್ಲದ ರೈತರು ಅನ್ಯಾಯವಾಗಿ ತಮ್ಮ ಜಮೀನುಗಳನ್ನು ಮಾರಿಕೊಳ್ಳುತ್ತಿದ್ದಾರೆ.

ಈ ಕಥೆ ಭೂ ಒತ್ತುವರಿಯನ್ನು ಕುರಿತು ಮಾತಾಡುವ ಕಥೆಯಾಗಿದೆ. ಈ ಕಥೆಯ ಮುಖ್ಯ ಪಾತ್ರಧಾರಿ ತೆಂಗಿನ ಮರದ ಹಟ್ಟಿ ದೇವಪ್ಪನಿಂದ ಕಾಳಿಂಗಯ್ಯ ನಾಲ್ಕು ಮೊಳ ಭೂಮಿ ಅಕ್ರಮವಾಗಿ ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿರುತ್ತಾನೆ. ಕಾಳಿಂಗಯ್ಯನಿಗೆ ತಾನು ಸಾಯುವ ಸಂದರ್ಭದಲ್ಲಿ ತನ್ನ ತಪ್ಪಿನ ಅರಿವಾಗುತ್ತದೆ. ಕಾಳಿಂಗಯ್ಯ ಉಳುತ್ತಲೇ ತಾನು ಮಾಡಿದ ತಪ್ಪನ್ನು ದುಃಖದಿಂದ ಹೀಗೆ ನೆನೆಯುತ್ತಾನೆ. “ನಾಲ್ಕು ಮೊಳ ಭೂಮಿ ಇನ್ನೊಬ್ಬನಿಗೆ ಸೇರಿದ ಆಸ್ತಿ. ಅದಕ್ಕೆ ತಾನು ಆಸೆ ಪಟ್ಟಿದ್ದೆ, ಇನ್ನೊಬ್ಬನ ಹೆಂಡತಿಗೆ ಆಸೆ ಪಟ್ಟಂತೆ. (ಅಹಲ್ಯೆಗೆ ಆಸೆ ಪಟ್ಟ ಇಂದ್ರ) ಪಕ್ಕದ ಭೂಮಿ ತೆಂಗಿನ ಮರದ ಹಟ್ಟಿ ದೇವಪ್ಪನದು. ಅದರಲ್ಲಿ ನಾಲ್ಕು ಮೊಳ ಭೂಮಿಯನ್ನು ಬಲಾತ್ಕಾರದಿಂದ ಅಕ್ರಮವಾಗಿ ಉತ್ತು ‘ಒತ್ತುವರಿ’ ಮಾಡಿಕೊಂಡಿದ್ದ ಕಾಳಿಂಗ ಭೀಮಕಾಯ ಅವನಿಗೇ ಜಯ ಲಭಿಸಿತು. ದೇವಪ್ಪ ಗ್ರಾಮ ಪಂಚಾಯಿತಿಗೆ ದೂರು ಕೊಟ್ಟ. ನ್ಯಾಯ ಕಾಳಿಂಗನಂತೆಯೇ ಆಯಿತು.”[2] ಭೂಮಿ ಕಳೆದುಕೊಂಡ ದೇವಪ್ಪ ಆಡುವ ಮಾತುಗಳು ತುಂಬಾ ಮಾರ್ಮಿಕವಾಗಿವೆ. “ನನ್ನ ನೆಲ ತಕ್ಕೊಂಬುಟ್ಟಿಯಾ? ಆ ಮಣ್ಣಿಗೆ ನನ್ನ ರಕ್ತ ಸುರಿಸಿವ್ನಿ ಕಣೋ ಪಾಪಿ

ದೇವರು ನಿಂಗೆ ಏಳಿಗೆ ಕೊಟ್ಟಾನಾ? ನನ್ನ ವಡವೆಗೆ ಅಪೇಕ್ಸೆ ಪಟ್ಟು ನನ್ನ ಜೀವ ಕೊಂದು ಬಿಟ್ಟಿದ್ದೀಯೇ ಇರಲಿ. ನನ್ನ ಮಗ ನಿಚ್ಚಯವಾಗಿ ಸೇಡು ತೀರಿಸಿಕೊಳ್ಳುತ್ತಾನೆ. ನೆಪ್ಪಿಡು. ರಕ್ತಕ್ಕೆ ರಕ್ತ ಕೆಡವಿ ಆ ನೆಲಾನ ತಿರುಗ ಸಂಪಾದ್ನೆ ಮಾಡ್ತಾನೆ.. ಹುಸಾರು. ಗೆದ್ದೆ ಅಂದುಕೋ ಬ್ಯಾಡ. ನಿನ್ನ ಕಥೆ ಮುಗಿದ ಹೊರತು ನನ್ನ ಕಥೆ ಮುಗಿಯದಲ್ಲ. ಗೊತ್ತಾಯಿತಾ?"[3] ದೇವಪ್ಪ ಸತ್ತ ಹಲವು ವರ್ಷಗಳ ನಂತರ ಮತ್ತೆ ಕಥೆ ಪ್ರಾರಂಭವಾಗುತ್ತದೆ. ಆ ವೇಳೆಗಾಗಲೇ ಕಾಳಿಂಗಯ್ಯ ಮುದುಕನಾಗಿರುತ್ತಾನೆ. ಪಕ್ಕದ ಹೊಲದಲ್ಲೇ ಉಳುತ್ತಿದ್ದ ದೇವಪ್ಪನ ಮಗನ ವಜ್ರಕಾಯವನ್ನು ನೋಡಿ ಭಯಪಡುತ್ತಾನೆ. ನಾನು ಮುದುಕನಾದೆ. ಮಕ್ಕಳು ಇಲ್ಲ. ದೇವಪ್ಪನ ಮಗ ಈಗ ಬಲವಾಗಿದ್ದಾನೆ. ಅವನು ಖಂಡಿತವಾಗಿಯೂ ಸೇಡನ್ನು ತೀರಿಸಿಕೊಳ್ಳುತ್ತಾನೆ ಎಂದು ತನ್ನ ಮನದಲ್ಲಿ ಅಂದುಕೊಳ್ಳುತ್ತಾನೆ.

ಒಂದು ದಿನ ಕಾಳಿಂಗಯ್ಯ ಹೊಲವನ್ನು ಉಳುತ್ತ ತೂರಾಡಿ ಬಿದ್ದಿದ್ದನ್ನು ಕಂಡ ದೇವಪ್ಪನ ಮಗ ಆರು ನಿಲ್ಲಿಸಿ ಧಾವಿಸಿಬಂದ. ಕಾಳಿಂಗಯ್ಯನ ಪ್ರಜ್ಞೆ ಹೋದಂತಿತ್ತು. ಒಡನೆಯೇ ಕೆರೆಗೆ ಹೋಗಿ ನೀರು ತಂದು ಶುಶ್ರೂಷೆ ಮಾಡಿದ. ಸ್ವಲ್ಪ ಹೊತ್ತಿನ ಮೇಲೆ ಕಾಳಿಂಗಯ್ಯ ನಿಧಾನವಾಗಿ ಕಣ್ಣು ತೆರೆದ. ದೇವಪ್ಪನ ಮಗನ ಮುಖವನ್ನು ಕಂಡು ಮೃತ್ಯು ದರ್ಶನ ಮಾಡಿದವನಂತಾದ (ಗರುಡನನ್ನು ನೋಡಿದ ಹಾವು). ಬಿಟ್ಟ ಕಣ್ಣು ಥಟ್ಟನೆ ಮುಚ್ಚಿ ಹೋಯಿತು. "ನಾಲ್ಕು ಮೊಳ ಭೂಮಿ ನಾಕೇ ನಾಕು ಮೊಳ ಭೂಮಿ ಕೋಪ ಮಾಡಿಕೊ ಬ್ಯಾಡ ಸಂಸಾರ ಸಾಕಕ್ಕೆ. ಆ ಕೆಲಸ ಮಾಡಿಬಿಟ್ಟೆ ಕನಪ್ಪಾ ಸಂಸಾರ ಸಾಕಕ್ಕೆ"[4] ದೇವಪ್ಪನ ಮಗ ಏನೊಂದೂ ಅರ್ಥವಾಗದೇ ಮಿಕಿ ಮಿಕಿ ನೋಡುತ್ತಿದ್ದ. ಮುಚ್ಚಿದ ಕಣ್ಣು ತೆರೆಯಲೇ ಇಲ್ಲ.

ದೇವಪ್ಪ ತನ್ನ ಜಮೀನನ್ನು ಕಾಳಿಂಗಯ್ಯ ಒತ್ತುವರಿ ಮಾಡಿಕೊಂಡಿರುವ ವಿಚಾರವನ್ನು ತನ್ನ ಮಗನಿಗೆ ಹೇಳಿರುವ ಸಾಧ್ಯತೆ ತೀರಾ ಕಡಿಮೆ. ಏಕೆಂದರೆ ಕಾಳಿಂಗಯ್ಯ ಸಾಯುವ ಸಂದರ್ಭದಲ್ಲಿ ದೇವಪ್ಪನ ಮಗ ಕಾಳಿಂಗಯ್ಯನನ್ನು ಬದುಕಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆದರೆ ಅವನ ಪ್ರಯತ್ನ ಯಶಸ್ವಿಯಾಗುವುದಿಲ್ಲ.

ದೇವಪ್ಪ ಮಕ್ಕಳಲ್ಲಿ ದ್ವೇಷ ಮನೋಭಾವನೆಯನ್ನು ಬೆಳೆಸಬಾರದೆಂಬ ಉದ್ದೇಶದಿಂದ ಕಾಳಿಂಗಯ್ಯನ ವಿಚಾರವನ್ನು ಮಗನಿಗೆ ಹೇಳಿರುವುದಿಲ್ಲ. ಕೃಷಿ ಜಮೀನಿನ ಭೂ ಒತ್ತುವರಿಗಳನ್ನು ತೆರವುಗೊಳಿಸುವುದು ಸವಾಲಿನ ಸಂಗತಿ. ಖಾತೆದಾರರು ತಮ್ಮ ಜಮಿನುಗಳ ಹದ್ದುಬಸ್ತಿಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಬಾಜುದಾರರು ಒತ್ತುವರಿ ಮಾಡಿಕೊಂಡಿರುವ ಜಮೀನನ್ನು ಸೌಹಾರ್ದಯುತವಾಗಿ

ಜಮೀನನ್ನು ಬಿಟ್ಟುಕೊಡುವ ಉದಾಹರಣೆಗಳು ತೀರ ಕಡಿಮೆ.

ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿಗೆ ಅಳತೆಗೆಂದು ಸಲ್ಲಿಕೆಯಾಗುವ ಹೆಚ್ಚಿನ ಅರ್ಜಿಗಳು ಹದ್ದುಬಸ್ತಿಗೆ ಸಂಬಂಧಪಟ್ಟವು. ಜನತೆಯ ಅಸಹಕಾರ, ಅರ್ಜಿದಾರರ, ಬಾಜುದಾರರ ಅನಕ್ಷರತೆ, ದೌರ್ಬಲ್ಯ, ರಾಜಕೀಯ ಹಸ್ತಕ್ಷೇಪ, ಇತ್ಯಾದಿ ಕಾರಣಗಳಿಂದ ಎಲ್ಲಾ ಅರ್ಜಿಗಳಿಗೂ ನ್ಯಾಯದೊರಕಿಸಿಕೊಡಲು ಸಾಧ್ಯವಾಗುತ್ತಿಲ್ಲ. ಹಿಡುವಳಿ ಭೂಮಿಯ ಒತ್ತುವರಿಯನ್ನು ತೆರವುಗೊಳಿಸುವ ಅಧಿಕಾರ ತಹಸೀಲ್ದಾರ್‌ರವರಿಗೆ ಇಲ್ಲದ ಕಾರಣದಿಂದ ಅಕ್ರಮ ಹಿಡುವಳಿ ಜಮೀನುಗಳ ಭೂ ಒತ್ತುವರಿಯನ್ನು ತೆರವುಗೊಳಿಸುವುದು ಕಷ್ಟ ಸಾಧ್ಯವಾಗಿದೆ. ಅಕ್ಷರಸ್ಥ ರೈತರು ಅಕ್ಕಪಕ್ಕದ ಜಮೀನಿನ ರೈತರ ಜೊತೆ ವಿಶ್ವಾಸ ಹಾಳಾಗಬಾರದೆಂಬ ಕಾರಣಕ್ಕೆ ಜಮೀನುಗಳನ್ನು ಅಳತೆ ಮಾಡಿಸುವ ಗೋಜಿಗೆ ಹೋಗುವುದಿಲ್ಲ.

ಚದುರಂಗರು ಹಳೆ ಮೈಸೂರು ಪ್ರಾಂತ್ಯದ ಭೂ ವ್ಯಾಜ್ಯಗಳ ಸ್ವರೂಪವನ್ನು ಕಥೆಯಲ್ಲಿ ಬಳಸಿಕೊಂಡಿದ್ದಾರೆ. ಹಳೆ ಮೈಸೂರು ಪ್ರಾಂತ್ಯದ ಮೈಸೂರು, ಹಾಸನ, ಮಂಡ್ಯ, ಚಾಮರಾಜನಗರ, ತುಮಕೂರು, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆಯ್ದ ಭಾಗದಲ್ಲಿ ನೀರಾವರಿ ಸೌಲಭ್ಯವಿದೆ. ಈ ಕಾರಣದಿಂದ ಹಳೇ ಮೈಸೂರು ಭಾಗದಲ್ಲಿ ಹೆಚ್ಚಿನ ಭೂ ವ್ಯಾಜ್ಯ ಪ್ರಕರಣಗಳಿವೆ.

ಕಂದಾಯ ಇಲಾಖೆ ಯಾವುದೇ ಹೊಸನಿಯಮಗಳನ್ನು ಜಾರಿಗೆ ತಂದರೂ ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೆ ತರುವುದ–ರಿಂದ ಮೈಸೂರು ಹಾಗೂ ತುಮಕೂರು ಜಿಲ್ಲೆಗಳಲ್ಲಿ ಕಂದಾಯ ಇಲಾಖೆಯ ಕೆಲಸ ಕಾರ್ಯಗಳು ಅಷ್ಟು ಸುಲಭವಾಗಿ ಯಶಸ್ವಿಯಾಗುವುದಿಲ್ಲ. ಜಮೀನಿನ ಪೌತಿ ಖಾತೆಯ ವರ್ಗಾವಣೆಯ ಸಂದರ್ಭದಲ್ಲಿ ಕಡ್ಡಾಯವಾಗಿ ಮೃತ ವ್ಯಕ್ತಿಯ ಮರಣ ಪ್ರಮಾಣ ಪತ್ರವನ್ನು ಆರ್.ಡಿ.ಎಸ್. ವಂಶವೃಕ್ಷವನ್ನು ಕಡ್ಡಾಯವಾಗಿ ಹಾಜರುಪಡಿಸಬೇಕಾಗುತ್ತದೆ. ವಂಶವೃಕ್ಷದಲ್ಲಿ ಕಡ್ಡಾಯವಾಗಿ ಮೃತವ್ಯಕ್ತಿಯ ಎಲ್ಲಾ ಹೆಣ್ಣುಮಕ್ಕಳ ಹೆಸರನ್ನು ಸೇರಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಕುಟುಂಬ ಕಲಹಗಳು ಹೆಚ್ಚಾಗುತ್ತವೆ.

ಪಿತ್ರಾರ್ಜಿತ ಆಸ್ತಿಯಲ್ಲಿ ಹೆಣ್ಣು ಮಕ್ಕಳಿಗೂ ಪಾಲು ನೀಡಬೇಕೆಂಬ ನಿಯಮ ಸರಿಯಾಗಿ ಪಾಲನೆಯಾಗುತ್ತಿಲ್ಲ. ಇಡೀ ದೇಶದಲ್ಲಿ ಕರ್ನಾಟಕ ರಾಜ್ಯ ಅತಿ ಹೆಚ್ಚಿನ ಒಣಭೂಮಿಯನ್ನು ಹೊಂದಿರುವ ಎರಡನೇ ಅತಿ ದೊಡ್ಡ ರಾಜ್ಯವಾಗಿದೆ. ಸರ್ಕಾರದ ಸಡಿಲ ನಿಯಮಗಳಿಂದ ನಮ್ಮ ರಾಜ್ಯದ ಭೂಮಿ ಅನ್ಯದೇಶದವರ, ಅನ್ಯ ರಾಜ್ಯದವರ, ಬಂಡವಾಳ ಶಾಹಿಗಳ ಪಾಲಾಗುತ್ತಿದೆ. ಜನಸಂಖ್ಯೆ ಹೆಚ್ಚಾದಂತೆ

ಭೂಮಿಯ ಹಂಚಿಕೆಯೂ ಕಡಿಮೆಯಾಗುತ್ತದೆ. ಅತಿಯಾದ ರಸಾಯನಿಕ ಗೊಬ್ಬರಗಳ ಬಳಕೆಯಿಂದ ಸಾಕಷ್ಟು ಕೃಷಿ ಭೂಮಿ, ಮರುಭೂಮಿಯಾಗಿ ಪರಿವರ್ತನೆಯಾಗಿದೆ. ಇನ್ನಾದರೂ ಅಳಿದುಳಿದ ವ್ಯವಸಾಯ ಯೋಗ್ಯ ಭೂಮಿಯನ್ನು ಜತನದಿಂದ ಕಾಪಾಡಿಕೊಳ್ಳಬೇಕಾದ ಜವಾಬ್ದಾರಿ ಕನ್ನಡಿಗರ ಮೇಲಿದೆ.

ಹಿಡುವಳಿ ಭೂಮಿ ಮಾತ್ರವಲ್ಲದೆ ಅರಣ್ಯ ಭೂಮಿಯನ್ನು ಜತನದಿಂದ ಕಾಪಾಡಿಕೊಳ್ಳಬೇಕಾದ ಜವಾಬ್ದಾರಿ ಕನ್ನಡಿಗರ ಮೇಲಿದೆ. ಪಶ್ಚಿಮ ಘಟ್ಟದ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಿತಿಮೀರಿ ಅರಣ್ಯ ಒತ್ತುವರಿಯಾಗಿದೆ. ಅತಿಯಾದ ಅರಣ್ಯ ನಾಶದಿಂದ ಕರ್ನಾಟಕದಲ್ಲಿ ಅಸಹಜ ಮಳೆ, ಅಕಾಲಿಕ ಮಳೆಯಂತಹ ಪ್ರಕೃತಿ ವಿಕೋಪಗಳು ಹೆಚ್ಚುತ್ತಿವೆ. ಮುಂದಿನ ದಿನಗಳಲ್ಲಿ ಕರ್ನಾಟಕ ಮರುಭೂಮಿಯಾಗಲಿದೆ. ಅರಣ್ಯ ಒತ್ತುವರಿಯನ್ನು ಮಾಡಿಕೊಂಡಿರುವ ಪ್ರಭಾವಿ ರಾಜಕಾರಣಿಗಳು, ಅವರ ಅನುಯಾಯಿಗಳು, ಬಂಡವಾಳ ಶಾಹಿಗಳು, ಉದ್ಯಮಿಗಳು ಬೇರೆ ರಾಜ್ಯ, ಬೇರೆ ದೇಶಗಳಿಗೆ ವಲಸೆ ಹೋಗಲಿದ್ದಾರೆ. ಹೀಗಾಗಿ ಸಾರ್ವಜನಿಕರು ಅಕ್ರಮ ಅರಣ್ಯ ಒತ್ತುವರಿ ತೆರವುಗೊಳಿಸಲು ಹೋರಾಟ ಮಾಡಬೇಕಾದ ತುರ್ತು ಅನಿವಾರ್ಯತೆ ಇದೆ.

'ನಾಲ್ಕು ಮೊಳ ಭೂಮಿ' ಕಥೆ ಚಿಕ್ಕದಾದರೂ ಅದು ಬೀರಿರುವ ಪ್ರಭಾವ ಮಹತ್ವ ಪೂರ್ಣವಾದುದು. ಚದುರಂಗ ಅವರು ಶಿಷ್ಟ ಭಾಷೆಗೆ ಹತ್ತಿರವಾದ ಹಳೆ ಮೈಸೂರು ಪ್ರಾಂತ್ಯದ ಭಾಷೆಯಲ್ಲಿ ಕಥೆಯನ್ನು ರಚಿಸಿದ್ದಾರೆ. ಎಲ್ಲಕ್ಕಿಂತ ಮೇಲಾಗಿ ಕಥೆಯ ವೇಗ ಬೆರಗುಗೊಳಿಸುವಂಥಹದ್ದು. ಕೆಲವೇ ನಿಮಿಷಗಳಲ್ಲಿ ಕಥೆಯನ್ನು ಓದಿ ಮುಗಿಸಬಹುದು. ಈ ಕಥೆ ಕನ್ನಡದ ಅತ್ಯುತ್ತಮ ಪತ್ತೇದಾರಿ ಕಥೆಯೂ ಹೌದು. ಏಕೆಂದರೆ ಈ ಕಥೆಯ ನಿರೂಪಣಾ ವಿಧಾನ ವಿಭಿನ್ನವಾಗಿದೆ. ಕಥೆಯೊಳಗೊಂದು ಕಥೆಯನ್ನು ಚದುರಂಗ ಅವರು ಹೆಣೆದಿದ್ದಾರೆ. ತಪ್ಪು ಮಾಡಿದ ಮನುಷ್ಯನಿಗೆ ಕ್ಷಮೆಯೇ ದೊಡ್ಡ ಶಿಕ್ಷೆ ಎಂಬ ಬೌದ್ಧ ಧರ್ಮದ ಗೌತಮ ಬುದ್ಧನ ಚಿಂತನೆ ಕಥೆಯಲ್ಲಿ ಎದ್ದು ಕಾಣುತ್ತದೆ. ಏಕೆಂದರೆ ಕಾಳಿಂಗಯ್ಯ ದೇವಪ್ಪನಿಗೆ ಮೋಸ ಮಾಡಿದರೂ ದೇವಪ್ಪಯ್ಯನ ಮಗ ಕಾಳಿಂಗಯ್ಯನನ್ನು ಗೌರವದಿಂದ ಕಾಣುತ್ತಾನೆ.

**ಕೊನೆ ಟಿಪ್ಪಣಿಗಳು:**

1. ಚದುರಂಗ, ಚದುರಂಗರ ಸಮಗ್ರ ಕಥೆಗಳು (1999), ಅಭಿರುಚಿ ಪ್ರಕಾಶನ, ಮೈಸೂರು, ಪುಟ 248
2. ಚದುರಂಗ, ಚದುರಂಗರ ಸಮಗ್ರ ಕಥೆಗಳು (1999), ಅಭಿರುಚಿ ಪ್ರಕಾಶನ, ಮೈಸೂರು, ಪುಟ 252
3. ಚದುರಂಗ, ಚದುರಂಗರ ಸಮಗ್ರ ಕಥೆಗಳು (1999), ಅಭಿರುಚಿ ಪ್ರಕಾಶನ, ಮೈಸೂರು, ಪುಟ 253
4. ಚದುರಂಗ, ಚದುರಂಗರ ಸಮಗ್ರ ಕಥೆಗಳು (1999), ಅಭಿರುಚಿ ಪ್ರಕಾಶನ, ಮೈಸೂರು, ಪುಟ 254

**ಆಕರ ಗ್ರಂಥಗಳು:**

1. ಚದುರಂಗ, ಚದುರಂಗರ ಸಮಗ್ರ ಕಥೆಗಳು (1999), ಅಭಿರುಚಿ ಪ್ರಕಾಶನ, ಮೈಸೂರು,
2. ಅಮೂರ ಜಿ. ಎಸ್. ಕನ್ನಡ ಕಥನ ಸಾಹಿತ್ಯ: ಸಣ್ಣ ಕಥೆ (2005), ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.